

## ಅಮಿತಾಭ್ ಅಫ್ಗನ್ ಅನುಭವದ ಮೆಲುಕು

ಅಫ್ಗಾನಿಸ್ತಾನವನ್ನು ತಾಲೀಬಾನಿಗಳು ವಶಕ್ಕೆ ತೆಗೆದುಕೊಂಡ ನಂತರದ ಬೆಳವಣಿಗೆಗಳು ಕಾಣುತ್ತಿರುವ ಹೊತ್ತಿದು. 1992ರಲ್ಲಿ ಆ ನೆಲದಲ್ಲಿ 'ಖುದಾ ಗವಾ' ಹಿಂದಿ ಸಿನಿಮಾದ ಚಿತ್ರೀಕರಣ ನಡೆದಿತ್ತು. ಅಮಿತಾಭ್ ಬಚ್ಚನ್ 2013ರಲ್ಲೇ ತಮ್ಮ ಫೇಸ್‌ಬುಕ್ ಪೋಸ್ಟ್‌ನಲ್ಲಿ ಅಲ್ಲಿನ ಅನುಭವವನ್ನು ಹಂಚಿಕೊಂಡಿದ್ದರು. ಅದು ಮತ್ತೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಸೋವಿಯತ್ ಒಕ್ಕೂಟದವರು ಅಫ್ಗಾನಿಸ್ತಾನದಿಂದ ಆಗಷ್ಟೇ ಜಾಗ ಖಾಲಿ ಮಾಡಿದ್ದರು. ನಜೀಬುಲ್ಲಾ ಅಹಮದ್‌ಜಾಯ್ ಕೈಗೆ ಅಧಿಕಾರ ಹಸ್ತಾಂತರವಾಗಿತ್ತು. ಮಜರ್–ಎ–ಷರೀಫ್‌ನಲ್ಲಿ ಚಿತ್ರೀಕರಣ. ಅಮಿತಾಭ್ ಬಚ್ಚನ್ ಅಲ್ಲಿ ಇದ್ದಾರೆನ್ನುವುದು ನಜೀಬುಲ್ಲಾ ಅವರಿಗೆ ತಿಳಿಯಿತು. ಹಿಂದಿ ಚಿತ್ರಗಳ ಅಭಿಮಾನಿಯಾದ ಅವರು, ತನ್ನಿಷ್ಟದ ನಟನಿಗೆ ಆತಿಥ್ಯ ಕೊಡಲು ನಿರ್ಧರಿಸಿದರು. ವಿಶೇಷ ವಿಮಾನದಲ್ಲಿ ದೇಶದ ಪ್ರಮುಖ ಸ್ಥಳಗಳನ್ನು ತೋರಿಸಿದರು. ಸಶಸ್ತ್ರ ಕಾವಲು ಪಡೆ ಸದಾ ಜತೆಗೆ ಇರುತ್ತಿತ್ತು. ಸಾಂಪ್ರದಾಯಿಕ ಸ್ವಾಗತವನ್ನು ಸ್ಥಳೀಯರು ಕೋರಿದ್ದರು. ಅವನ್ನೆಲ್ಲ ನೋಡಿ ಅಮಿತಾಭ್ ಖುಷಿ ಪಟ್ಟಿದ್ದರು. ಹೋಟೆಲ್‌ನಲ್ಲಿ ಇಳಿದುಕೊಳ್ಳಲು ಮೇರುನಟ ನಿರ್ಧರಿಸಿದ್ದರು. ಆದರೆ, ಸ್ಥಳೀಯರು ಅದಕ್ಕೆ ಅವಕಾಶ ಕೊಡಲಿಲ್ಲ. ಒಂದು ಪ್ರತಿಷ್ಠಿತ ಕುಟುಂಬದವರು ಸಣ್ಣ ಮನೆಗೆ ಸ್ಥಳಾಂತರಗೊಂಡು, ಚಿತ್ರೀಕರಣ ನಡೆಯುವ ಅಷ್ಟೂ ದಿನ ತಂಗಲು ಅಮಿತಾಭ್ ಬಚ್ಚನ್ ಅವರಿಗೆ ತಮ್ಮ ಮನೆಯನ್ನು ಬಿಟ್ಟುಕೊಟ್ಟಿದ್ದರೆನ್ನುವುದು ವಿಶೇಷ. ■

# ರಿಚಾ ವ್ಯಂಗ್ಯದ ಸೂಜಿಮೊನೆ

■ ವಿಶಾಖ ಎನ್.

ರಿಚಾ ಚಡ್ಡಾ ಇತ್ತೀಚೆಗೆ ಎರಡು ಕಾರಣಗಳಿಂದಾಗಿ ಸದ್ದು ಮಾಡಿದರು. ಒಂದು, ಅವರ ಜೊತೆಗಾರ ಎನ್ನಲಾಗುತ್ತಿರುವ ಅಲಿ ಫಜಲ್ ಒಟ್ಟಿಗೆ 'ಪುಷಿಂಗ್ ಬಟನ್ಸ್ ಸ್ಟುಡಿಯೋಸ್' ನಿರ್ಮಾಣ ಸಂಸ್ಥೆ ಹುಟ್ಟುಹಾಕಿದ್ದಕ್ಕೆ. ಇನ್ನೊಂದು, ಇನ್‌ಸ್ಟಾಗ್ರಾಂನಲ್ಲಿ ಬಾಲಿವುಡ್‌ನ ಆಷಾಢಭೂತಿಗಳನ್ನು ಹೆಸರು ಉಲ್ಲೇಖಿಸದೆ ಬೆಂಡೆತ್ತಿದ್ದಕ್ಕೆ.

'ಗರ್ಲ್ಸ್ ವಿಲ್ ಬಿ ಗರ್ಲ್ಸ್' ಎಂಬ ಹಿಂದಿ ಚಿತ್ರವನ್ನು ರಿಚಾ ತಮ್ಮ ನಿರ್ಮಾಣ ಸಂಸ್ಥೆಯಿಂದ ಚಿತ್ರೀಕರಿಸುವುದಾಗಿ ಘೋಷಿಸಿದ್ದಾರೆ. ಸುಚಿ ತಲಾಟಿ ಈ ಚಿತ್ರ ನಿರ್ದೇಶಿಸುವರು. ಈ ವರ್ಷ ಮಾರ್ಚ್‌ನಲ್ಲೇ ರಿಚಾ ನಿರ್ಮಾಣ ಸಂಸ್ಥೆ ತಲೆಎತ್ತುವ ಸುದ್ದಿ ಇತ್ತು. ಅದೀಗ ಟೇಕಾಫ್ ಆಗುತ್ತಿರುವುದು ಸಿನಿಪ್ರಿಯರಿಗೆ ಸಂತಸದ ವಿಷಯ.

ಹದಿನಾರು ವರ್ಷದ ಕ್ರಾಂತಿಕಾರಿ ಮನೋಭಾವದ ಹುಡುಗಿಯೇ 'ಗರ್ಲ್ಸ್ ವಿಲ್ ಬಿ ಗರ್ಲ್ಸ್' ಚಿತ್ರದ ಕೇಂದ್ರಪಾತ್ರ. ಉತ್ತರ ಭಾರತದ ಹಿಮಾಲಯದ ಪರ್ವತಶ್ರೇಣಿಯ ಪಟ್ಟಣದವಳಾದ ಆ ಹುಡುಗಿಯ ಧೋರಣೆಯನ್ನು ಆಕೆಯ ಅಮ್ಮನೇ ಹೇಗೆ ತನ್ನ ಅನುಕೂಲಕ್ಕೆ ಬಳಸಿಕೊಳ್ಳುತ್ತಾಳೆ ಎಂಬ ರೋಚಕ ಎಳೆಯನ್ನು ಚಿತ್ರಕಥೆ ಒಳಗೊಂಡಿದೆ.

ಸಿನಿಮಾ ನಿರ್ಮಾಣದ ವಿಷಯ ಇದಾಯಿತು. ಇತ್ತೀಚೆಗೆ ರಿಚಾ ಇನ್‌ಸ್ಟಾಗ್ರಾಂನಲ್ಲಿ ಹಿಂದಿ ಚಿತ್ರರಂಗದ ಸೋಗಲಾಡಿತನವನ್ನು ಸೂಕ್ಷ್ಮ ಮಾತುಗಳಲ್ಲಿ ಟೀಕಿಸಿದರು. 'ಬಾಂದ್ರಾ ಹಾಗೂ ಗೋರೆಗಾಂವ್ ನಡುವಿನ ಕಾಲ್ಪನಿಕ ವಿಳಾಸವೇ ಬಾಲಿವುಡ್. ತಮಗೆ ಕೆಲಸ ಆಗಬೇಕಾದಾಗ ನೀವು, ನಿಮ್ಮ ಆರೋಗ್ಯ, ನಿಮ್ಮ ವೃತ್ತಿಬದುಕು ಎಲ್ಲಕ್ಕೂ ಯಾವುದೆಲ್ಲ ಒಳ್ಳೆಯದು ಎಂದು ಕಿವಿಮೇಲೆ ಹಾಕುತ್ತಾ ನಾಜೂಕಾಗಿ ನಂಬಿಸಿಬಿಡುತ್ತಾರೆ. ನಾನೂ ಮೊದಮೊದಲು ಹಾಗೆ ನಂಬಿದವಳೇ. ಆದರೆ, ಅವರ ಮನದಾಳದ ಆಲೋಚನೆ ಏನೆಂಬುದು ಗೊತ್ತೇ ಆಗುವುದಿಲ್ಲ' ಎಂಬ ಧಾಟಿಯಲ್ಲಿ ಅವರು ವ್ಯಂಗ್ಯದ ಅಭಿಪ್ರಾಯ ಬರೆದಿದ್ದಾರೆ.

ಹಿಂದಿ ಚಿತ್ರರಂಗದ ಸ್ವಜನಪಕ್ಷಪಾತದ ಕುರಿತು ಉದ್ದುದ್ದ ಲೇಖನಗಳನ್ನು ಬರೆಯುವ, ವಿಡಿಯೊಗಳನ್ನು ಪ್ರಸಾರ ಮಾಡುವ, ಚರ್ಚೆಗಳನ್ನು ನಡೆಸುವ ಮಾಧ್ಯಮವನ್ನೂ ಅವರು ವಾರೆಗಣ್ಣಿನಿಂದ ನೋಡಿದ್ದಾರೆ. ಇಂತಹ ಮಾಧ್ಯಮಗಳ ಎಷ್ಟೋ ಜನ ಅನುಕೂಲಸಿಂಧುಗಳಾಗಿರುವುದನ್ನು ಕಂಡಿರುವುದಾಗಿ ಹೇಳಿದ್ದಾರೆ. ಖ್ಯಾತ ವಂಶಗಳ ಹೆಸರು ಯಾರದ್ದೇ ನಾಮಧೇಯದ ಪಕ್ಕ ಇದ್ದರೆ ಅವರನ್ನು ಓಲೈಸಿರುವ ರೀತಿ ತಮ್ಮಲ್ಲಿ ಇಂತಹ ಅಭಿಪ್ರಾಯ ಮೂಡಲು ಕಾರಣವಾಗಿದೆ ಎಂದಿರುವ ರಿಚಾ, 'ಸುಧಾರಿಸಿಕೊಳ್ಳಲು ಇದು ಸಕಾಲ. ಒಟಿಟಿ ತರಹದ ವೇದಿಕೆಗಳು ಮುಕ್ತವಾಗಿವೆ. ಕಾಫಿಯ ನಿಜ ಪರಿಮಳವನ್ನು ಈಗ ಆಘ್ರಾಣಿಸಿ' ಎಂದು ಇನ್ನೊಂದು ಎಚ್ಚರಿಕೆಯ ಒಕ್ಕಣೆಯೊಂದಿಗೆ ತಮ್ಮ ಇನ್‌ಸ್ಟಾಗ್ರಾಂ ಪೋಸ್ಟ್. ■

